

# ಬಲೂನ್ ದ್ರಾಕ್ಷಿ

■ ಚಿತ್ರ- ಲೇಖನ: ಸದಾರಮೆ



ಕಳೆ ಗಿಡದಂತೆ ಬೇಲಿಗಳಲ್ಲಿ, ರಸ್ತೆ ಬದಿಗಳಲ್ಲಿ, ತೋಟ ಹಾಗೂ ಗದ್ದೆಗಳ ಬದುಗಳಲ್ಲಿ, ಪಾಳು ಬಿದ್ದ ಸ್ಥಳಗಳಲ್ಲಿ ತನ್ನಿಂದ ತಾನೇ ಯಾವುದೇ ಆರೈಕೆ ಇಲ್ಲದೆ ಬೆಳೆಯುವ ಈ ಗಿಡವನ್ನು ಬಲೂನ್ ಗಿಡ ಅಥವ ಬಲೂನ್ ದ್ರಾಕ್ಷಿ ಗಿಡ ಎನ್ನುತ್ತಾರೆ. ಬಹಳ ಮೃದುವಾಗಿರುವ ಕಾಂಡ ಹೊಂದಿರುವ ಈ ಗಿಡ ಇತರ ಗಿಡಗಳನ್ನು ಆಧರಿಸಿ ಬೆಳೆಯುತ್ತದೆ. ಚೂಪಾದ ಹಸಿರು ಬಣ್ಣದ ಎಲೆಗಳನ್ನು ಹೊಂದಿರುವ ಗಿಡದಲ್ಲಿ ಬಲೂನ್‌ನನ್ನು ಹೋಲುವ ಹೊರಕವಚವನ್ನು ಹೊಂದಿದ ಕಾಯಿಗಳು ನೇತಾಡುವುದನ್ನು ಕಾಣಬಹುದು. ಈ ಕವಚವನ್ನು ಒಡೆದರೆ ಹಸಿರು ಮಿಶ್ರಿತ ಹೊಂಬಣ್ಣದ ಪುಟ್ಟ ದ್ರಾಕ್ಷಿಯನ್ನು ಹೋಲುವ ಹುಳಿ ಮಿಶ್ರಿತ ಸಿಹಿರುಚಿಯ ಹಣ್ಣನ್ನು ಸವಿಯಬಹುದು.

ಕಾರ್ಡಿಯೋಸ್ಪರಮಮ್ ಎಂಬ ವೈಜ್ಞಾನಿಕ ಹೆಸರುಳ್ಳ ಇದು ಸೋಪ್‌ಬೆರಿ ಕುಟುಂಬಕ್ಕೆ ಸೇರಿದೆ. ಆಂಗ್ಲಭಾಷೆಯಲ್ಲಿ ಇದಕ್ಕೆ 'ಬಲೂನ್ ವೈನ್' ಎನ್ನುತ್ತಾರೆ. ತಂಪು ವಾತಾವರಣವಿರುವ ಬೆಚ್ಚಗಿನ ಹವಾಗುಣದಲ್ಲಿ ಚೆನ್ನಾಗಿ ಬೆಳೆಯುವ ಈ ಗಿಡದಲ್ಲಿ ಬಿಳಿಯ ಸಣ್ಣ ಸಣ್ಣ ಹೂವುಗಳನ್ನು ಕಾಣಬಹುದು. ಗಿಡದಲ್ಲಿ ಕಾಯಿಗಳು ತುಂಬಿದಾಗ ನೋಡಲು ಬಲೂನ್ ನೇತಾಡುವಂತೆ ಭಾಸವಾಗುತ್ತದೆ. ಚಿಣ್ಣರಂತೂ ಇದರ ಹೊರಗಿನ ಕವಚವನ್ನು 'ಟಪ್' ಎಂದು ಒಡೆದು ಒಳಗಿನ ಹಣ್ಣನ್ನು ಆನಂದದಿಂದ ಸವಿಯುತ್ತಾರೆ. ಕಳೆಯಂತೆ ಬೆಳೆಯುವ ಈ ಗಿಡವು ಪ್ರಪಂಚದಾದ್ಯಂತ ಕಂಡುಬರುತ್ತದೆ.

ತಂಪುಗುಣವನ್ನು ಹೊಂದಿರುವ ಇದರ ಎಲೆಗಳನ್ನು 'ನ್ಯಾಚುರಲ್ ಶಾಂಪೂ' ಆಗಿ ಬಳಸುತ್ತಾರೆ. ಇದನ್ನು ಬಳಸಿದರೆ ಕೂದಲು ಬೇಗನೆ ಬಿಳಿಯಾಗುವುದಿಲ್ಲ. ಕಪ್ಪಾಗಿ ಸೊಂಪಾಗಿ ಬೆಳೆಯಲು ಸಹಾಯಕವಾಗುತ್ತದೆ. ಇದರ ಬೀಜದ ಸಾರ ಹಾಗೂ ಎಲೆಗಳನ್ನು ಉಪಯೋಗಿಸಿ ತಯಾರಿಸಿದ ಮುಲಾಮು ಚರ್ಮದ ತೊಂದರೆಗಳಿಗೆ ಉಪಯೋಗಿಸಲ್ಪಡುತ್ತದೆ.

ನಾಟಿವೈದ್ಯರು ಇದರ ಎಲೆಗಳನ್ನು, ಶರೀರದಲ್ಲಿ ಉಂಟಾಗುವ ಗಂಟುಗಳ ನೋವು ಹಾಗೂ ಸೆಳೆತಗಳಿಗೆ ಮತ್ತು ಜ್ವರಕ್ಕೆ ಔಷಧಿಯಾಗಿ ಬಳಸುತ್ತಾರೆ. ಮೂತ್ರದ ತೊಂದರೆಗಳಿಗೆ ಇದರ ಬೇರಿನ ಉಪಯೋಗವಿದೆ. ಇದರ ಎಲೆಗಳಿಂದ ತೆಗೆದ ರಸವನ್ನು ತೆಂಗಿನೆಣ್ಣೆಯೊಂದಿಗೆ ಕಾಯಿಸಿ ತಲೆಗೆ ಹಚ್ಚುವುದರಿಂದ ಹೊಟ್ಟಿನ ಸಮಸ್ಯೆ ಪರಿಹಾರವಾಗಿ, ಕೂದಲು ಉದುರುವ ಸಮಸ್ಯೆಯೂ ದೂರವಾಗುತ್ತದೆ ಎನ್ನುತ್ತದೆ ಆಯುರ್ವೇದ.

ತಂಪುಗುಣದ ಇದರ ಎಲೆಗಳನ್ನು ಕರಿಬೇವಿನ ದಳಗಳ ಜೊತೆ ತುಪ್ಪದಲ್ಲಿ ಹುರಿದು ತೆಂಗಿನ ತುರಿ, ಹಸಿಮೆಣಸು, ಜೀರಿಗೆಯ ಜೊತೆ ನುಣ್ಣಗೆ ರುಬ್ಬಿ ಮಜ್ಜಿಗೆ ಮತ್ತು ಉಪ್ಪು ಸೇರಿಸಿ ತಂಬುಳಿ ತಯಾರಿಸಬಹುದು. ಕ್ಯಾಲ್ಸಿಯಂ ಮತ್ತು ಕಬ್ಬಿಣಾಂಶಗಳಿಂದ ಕೂಡಿದ ಈ ತಂಬುಳಿಯ ಕ್ರಮಬದ್ಧ ಸೇವನೆಯಿಂದ ರಕ್ತಹೀನತೆಯನ್ನು ಹೋಗಲಾಡಿಸಬಹುದು.